<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>

<u>ಅಸಲು ದಾವೆ. ಸಂಖ್ಯೆ 266/2020</u>

ಡಿ.ಡಬ್ಲ್ಯೂ01 ಶ್ರೀನಾರಾಯಣಸ್ವಾಮಿ

**ಸಾಕ್ಷಿಯನ್ನು ದಿನಾಂಕಃ 07-07-2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**<u>ಪಾಟಿ ಸವಾಲು ಃ- ವಾದಿ ಪರ ವಕೀಲರಿಂದ ಪರ ಶ್ರೀ. ಬಿ ವಿ ವಿ ವಕೀಲರಿಂದ</u>**

**1.**ನನಗೆ ಈ ದಾವೆಯ 1 ಮತ್ತು 2 ನೇ ವಾದಿಯ ಪರಿಚಯ ಇದೆಯಾ ಎಂದರೆ ಇಲ್ಲ. ಈ ದಾವೆಯನ್ನು ವಾದಿಗಳು ದಾವಾಸ್ತಿಯು ಅವರಿಗೆ ಸೇರಿದ್ದು ಎಂದು ಹೇಳಿ ಹಾಕಿದ್ದು ಆದರೆ ಅವರಿಗೂ ದಾವಾಸ್ತಿಗೂ ಯಾವುದೇ ಸಂಬಂಧ ಇಲ್ಲ. ಈ ದಾವೆಯನ್ನು ವಾದಿಗಳು 6 ಆಸ್ತಿಗೆ ಸಂಬಂಧಪಟ್ಟಂತೆ ಹೂಡಿದ್ದು ಅವುಗಳ ಸರ್ವೇ ನಂ 13, 262,539,558,447,458 ಎಂದಾಗಿರುತ್ತದೆ . ಸದರಿ ಆಸ್ತಿಗಳ ವಿಸ್ತೀರ್ಣಗಳನ್ನು ನನಗೆ ಹೇಳಾಲಾಗುವುದಿಲ್ಲ. ನಾನು ಇಲ್ಲಿಯವರೆಗೆ ವಾದಿಗಳು ದಾವಾಸ್ತಿಗಳು ಯಾರಿಗೆ ಮೂಲತಃ ಯಾರಿಗೆ ಸೇರಿದ್ದು ಎಂಬ ಬಗ್ಗೆ ವಾದ ಪತ್ರದಲ್ಲಿ ನಮೂದು ಮಾಡಿದ್ದು ನಾನು ಅದನ್ನು ತಿಳಿದುಕೊಂಡಿದ್ದೇನಾ ಎಂದರೆ ಇಲ್ಲ. ದಾವಾಸ್ತಿಗಳು ತೋಟಿ ನೌಕರಿ ಜಮೀನುಗಳು ಎಂದರೆ ಸರಿ . ದಾವಾಸ್ತಿಗಳ ಒಟ್ಟು ವಿಸ್ತೀರ್ಣಗಳಲ್ಲಿ ಮುನಿಸ್ವಾಮಿ ಗುಣಪ್ಪ, ವೆಂಕಟಮುನಿ, ಗೌರಪ್ಪ ,ಸವಾರಿ ವೆಂಕಟರಮಣ, ಕೃಷ್ಣಪ್ಪ, ಪಾಪಯ್ಯ ಮುಂತಾದವರು ತೋಟಿ ನೌಕರಿಗಳನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮೊದಲು ಕೆಲವರು ಮಾಡುತ್ತಿದ್ದು ನಂತರ 1972 ರಲ್ಲಿ ಅದನ್ನು ರದ್ದು ಮಾಡಲಾಗಿರುತ್ತದೆ ಎನ್ನುತ್ತಾರೆ.

**2.** ನನ್ನ ಪ್ರಕಾರ ಸದರಿ ದಾವಾಸ್ತಿಗಳ ಒಟ್ಟು ವಿಸ್ತೀರ್ಣಗಳಲ್ಲಿ ತೋಟಿ ಮುನಿಸ್ವಾಮಿ, ಗೂಣಪ್ಪ ವೆಂಕಟಮುನಿ, ಮುನಿವೆಂಕಟಪ್ಪ ಕೃಷ್ಣಪ್ಪ ಮತ್ತು ಗಿಡ್ಡಪ್ಪರವರು ತೋಟಿ ನೌಕರಿಗಳನ್ನು ಮಾಡುತ್ತಿದ್ದರು. ಈ ದಾವೆಯ ಒಂದನೇ ವಾದಿಯ ಗಂಡನಾದ ಪಾಪಯ್ಯ ಮತ್ತು ಒಂದನೇ ವಾದಿಯ ಮಾವನಾದ ಗೌರಪ್ಪರವರಿಗೆ ದಾವಾಸ್ತಿಗಳನ್ನು ದಿನಾಂಕ **13.06.1973** ರಂದು ಸಹಾಯಕ ಕಮಿಷನರ್ ರವರು ಮರು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ಹೌದು ಎಂದು ಹೇಳಿ ನಂತರ ಅಲ್ಲ ಎನ್ನುತ್ತಾರೆ. ಸದರಿ ಪಾಪಯ್ಯ ಮತ್ತು ಗೌರಪ್ಪರವರು ಅನಕ್ಷರಸ್ತರಾದ ಕಾರಣ ವೆಂಕಟ ಮುನಿಯವರು ದಾವಾಸ್ತಿಗಳಿಗೆ ಸಂಬಂಧಪಟ್ಟಂತೆ ಅವರ ಗಮನಕ್ಕೆ ಬಾರದಂತೆ ದಾಖಲೆಗಳನ್ನು ಸೃಷ್ಟಿಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ವೆಂಕಟಮುನಿಯಿಂದ ವಾದಿಗಳಿಗೆ ಮೋಸ ಮಾಡುವ ಸಲುವಾಗಿ ನಾನು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**3.** ವಾದಿಗಳು ದಿ. **01.06.2020** ರಂದು ನಾನು ಮೇಲೆ ಹೇಳಿದಂತೆ ದಾಖಲೆಗಳನ್ನು ಸೃಷ್ಟಿಮಾಡಿಕೊಂಡ ಕಾರಣ ಈ ದಾವೆಯನ್ನು ನಮ್ಮ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ವಾದಿಗಳು ಸಹಾಯಕ ಕಮಿಷನರ್ ರವರು ಮಾಡಿದ ಆದೇಶದಂತೆ ಅವರು ದಾವಾಸ್ತಿಗಳ ಮಾಲೀಕರು ಮತ್ತು ಆರ್ ಎ 37/2014 ರ ತೀರ್ಪು ಅವರಿಗೆ ಅನ್ವಯಿಸುವುದಿಲ್ಲ ಎಂದು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ನಿ. ಪಿ 3 ರಂತೆ ತಹಶೀಲ್ದಾರ್ ರವರು ಸಹಾಯಕ ಕಮಿಷನರ್ ರವರಿಗೆ ದಾವಾಸ್ತಿಗಳಲ್ಲಿ ಒಂದನೇ ವಾದಿಯವರ ಮಾವನಾದ ಗೌರಪ್ಪ ನವರು ತೋಟಿ ನೌಕರಿ ಮಾಡುತ್ತಿದ್ದಾರೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿ ಒಂದನೇ ವಾದಿಯ ಮಾವನಾದ ಗೌರಪ್ಪ ರವರಿಗೆ ಸೇರಿದ ತೋಟಿ ನೌಕರಿ ಆಸ್ತಿಯಲ್ಲಿ ವೆಂಕಟ ಮುನಿ ರವರು ಅನುಭೋಗಿಸಿಕೊಂಡು ಇದ್ದು ಸದರಿ ವಿಚಾರವನ್ನು ಆ ಸಮಯದಲ್ಲಿ ವೆಂಕಟ ಮುನಿರವರು ಒಪ್ಪಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವೆಂಕಟ ಮುನಿರವರ ಸಹಿಯನ್ನು ನೋಡಿದ್ದು ಅವರು ಆಂಗ್ಲ ಭಾಷೆ ಯಲ್ಲಿ ಸಹಿಮಾಡುತ್ತಾರೆ. ಸಾಕ್ಷಿಗೆ ನಿಪಿ 3 ರ ನಾಲ್ಕನೇ ಪುಟವನ್ನು ತೋರಿಸಲಾಗಿ ವೆಂಕಟ ಮುನಿರವರ ಸಹಿಯನ್ನು ನೋಡಿ ಸಾಕ್ಷಿಯು ಗುರುತಿಸಿದ ಕಾರಣ ಅದನ್ನು ನಿಪಿ 3 ಎ ಎಂದು ಗುರುತಿಸಲಾಯಿತು.

4. ಒಂದನೇ ವಾದಿಯ ಗಂಡನಾದ ಪಾಪಯ್ಯರವರು ತೋಟಿ ನೌಕರಿ ಮಾಡುತ್ತಿದ್ದ ಕಾರಣ ನಿ ಪಿ 5 ರಂತೆ ಸಂಬಂಧಪಟ್ಟ ಇಲಾಖೆಯವರು ಒಂದು ಪಟ್ಟಿಯನ್ನು ತಯಾರಿಸಿದ್ದು ಅದರಲ್ಲಿ ಕ್ರಮ ಸಂಖ್ಯೆ 3 ರಲ್ಲಿ ಸದರಿ ಪಾಪಯ್ಯರವರ ಹೆಸರು ಬರುತ್ತಿದೆ ಎಂದರೆ ಸಾಕ್ಷಿಯು ಪಾಪಯ್ಯ ರವರು ನೀರಿಗಟ್ಟಿ ಚಾಕರಿ

ಮಾಡುತ್ತಿದ್ದರು ಎನ್ನುತ್ತಾರೆ . ನಿಪಿ 7 ರಂತೆ ತಹಶೀಲ್ದಾರ್ ರವರು ದಿ. 02.09.1979 ರಂದು ದಾವಾಸ್ತಿಗೆ ಸಂಬಂಧಪಟ್ಟಂತೆ ಪಾಪಯ್ಯ ಮತ್ತು ಗೌರಪ್ಪ ರವರ ಹೆಸರಿಗೆ 1 ಕಾಲು ಇಸೆಯಂತೆ ಭಾಗವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಒಂದೇ ಕುಟುಂಬದ ಇಬ್ಬರಿಗೆ ಯಾವ ರೀತಿ ಅದರಂತೆ ಕೊಡುತ್ತಾರೆ ಎನ್ನುತ್ತಾರೆ . ನಾನು ಇಲ್ಲಿಯವರೆಗೆ ಸದರಿ ನಿಪಿ 7 ರ ಅಂಶಗಳ ಸಂಬಂಧಪಟ್ಟ ಇಲಾಖೆಗಳ ಎದುರು ಪ್ರಶ್ನಿಸಿದ್ದಾನಾ ಎಂದರೆ ಇಲ್ಲ . ದಾವಾಸ್ತಿಗಳನ್ನು ನನಗೆ ನನ್ನ ಸಾಕು ತಂದೆಯಾದ ವೆಂಕಟಮುನಿ ರವರು 1989-90 ಸಾಲ್ಲಿನಲ್ಲಿ ಮರಣ ಶಾಸನ ಪತ್ರದ ಮೂಲಕ ಕೊಟ್ಟಿರುತ್ತಾರೆ. . ಅದರಂತೆ ಆ ಸಮಯದಲ್ಲಿ ದಾವಾಸ್ತಿಗಳು ನನ್ನ ಹೆಸರಿಗೆ ದಾಖಲಾಗಿರುತ್ತದೆ . ನನ್ನ ಸಾಕು ತಂದೆಯಾದ ವೆಂಕಟ ಮುನಿರವರು 15-05-1990 ರಲ್ಲಿ ಮರಣ ಹೊಂದಿರುತ್ತಾರೆ. ನಾನು ಇಲ್ಲಿ ಯವರೆಗೆ ಸದರಿ ನನ್ನ ಸಾಕು ತಂದೆಯವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ . ಮುಂದೆ ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

5. ಎರಡನೇ ಪ್ರತಿವಾದಿಯಾದ ವೆಂಕಟಮ್ಮ ನನ್ನ ಸಾಕು ತಾಯಿ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಅವರು ಜೀವಾಂತ ಇರುತ್ತಾರೆ. ನನ್ನ ಪ್ರಕಾರ ಸದರಿ ಎರಡನೇ ಪ್ರತಿವಾದಿ ಮತ್ತು ನನ್ನ ಸಾಕು ತಂದೆಯಾದ ವೆಂಕಟ ಮುನಿರವರು ನಿ ಡಿ 25 ರಂತೆ ನನಗೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಹೌದು. ಸದರಿ ವೆಂಕಟ ಮುನಿರವರು ಮರದ ಘಟ್ಟದ ನಿವಾಸಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನಾನು ನೋಡಿದ ಸಮಯದಿಂದ ಅವರು ಬೇತಮಂಗಲ ದಲ್ಲಿ ವಾಸಮಾಡುತ್ತಿದ್ದರು ಎನ್ನುತ್ತಾರೆ . ಸದರಿ ನಿ ಡಿ 25 ರಂತೆ ಮರಣ ಶಾಸನ ಪತ್ರದಲ್ಲಿ ವೆಂಕಟಮುನಿರವರು ಬೇತಮಂಗಲ ನಿವಾಸಿ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ . ನನ್ನ ಪ್ರಕಾರ ಮರದಘಟ್ಟ ವೆಂಕಟಮುನಿ ಬೇರೆ ಬೇತಮಂಗಲ ವೆಂಕಟ ಮುನಿ ಬೇರೆ ಎಂದರೆ ಸಾಕ್ಷಿಯು ನನ್ನ ಸಾಕು ತಂದೆಯವರು ಬೇತಮಂಗಲ ವೆಂಕಟಮುನಿ ಎನ್ನುತ್ತಾರೆ . ನಿ ಡಿ 25 ವೆಂಕಟ ಮುನಿ ರವರ ಮರಣ ನಂತರ ಮತ್ತು ಅವರ ಮರಣ ಪೂರ್ವ ದಲ್ಲಿ ನನ್ನ ಬಳಿ ಇತ್ತು . ನಿಡಿ 25 ಮರಣ ಶಾಸನ ಪತ್ರವನ್ನು ನಾನೆ ವೆಂಕಟ ಮುನಿ ಮತ್ತು ಎರಡನೇ ಪ್ರತಿವಾದಿಯಿಂದ ಬರೆಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಇಲ್ಲ ಅವರು ನನ್ನನ್ನು ಕರೆದುಕೊಂಡು ಹೋಗಿ ನಿ ಡಿ 25 ನ್ನು ನನ್ನ ಹೆಸರಿಗೆ ಬರೆಸಿರುತ್ತಾರೆ ಎನ್ನುತ್ತಾರೆ .

6. ಸದರಿ ನಿ ಡಿ 25 ರ ಅಂಶಗಳನ್ನು ನಾನು ಪತ್ರ ಬರಹಗಾರರಿಗೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿ . ನಿ ಡಿ 25 ರಲ್ಲಿರುವ ಸಾಕ್ಷಿಗಳು ನನ್ನ ಸಮಕ್ಷಮ ಅದಕ್ಕೆ ಸಹಿಗಳನ್ನು ಹಾಕಿರುತ್ತಾರೆ ಎಂದರೆ ಸರಿ . ನನ್ನ ಪ್ರಕಾರ ನನ್ನ ಹೆಸರಿನಲ್ಲಿ ಇರುವ ಆಸ್ತಿಗಳೆಲ್ಲವೂ ನಿಡಿ 25 ರ ಅಂಶದಂತೆ ಬಂದಿರುತ್ತದೆ ಎಂದರೆ ಹೌದು . ನಿ ಡಿ 13 ರಲ್ಲಿ ನಮೂದಾಗಿರುವ ಆರ್ ಎ 37/2014 ಎಂಬ ದಾವೆಯನ್ನು ನಾನು ಮತ್ತು ನನ್ನ ಸಾಕು ತಾಯಿಯಾದ ಎರಡನೇ ಪ್ರತಿವಾದಿಯು ಸುಬ್ರಮಣಿ ಮತ್ತು ರವಿ ವಿರುದ್ಧ ಹೂಡಿದ್ದು ಕಾರಣ ಸಬ್ ಇನ್ಸ್ಪೆಕ್ಟರ್ ರಾದ ಆರ್ ವೆಂಕಟೇಶ್ ರವರು ಅವರ ಹೆಂಡತಿಯಾದ ನಾಗವೇಣಿ ರವರ ಶವವನ್ನು ನಮ್ಮ ಜಮೀನಿನಲ್ಲಿ ಹೂಡಲು ಬಂದ ಕಾರಣ ಹಾಕಿರುತ್ತೇವೆ . ನಿಡಿ 15 ನ್ನು ನಾಗವೇಣಿ ರವರು ನಮ್ಮ ವಿರುದ್ಧ ದಾವೆ ಹೂಡಿದ ಕಾರಣ ಅದನ್ನು ಸಲ್ಲಿಸಿರುತ್ತೇನೆ . ನಾನು ವಾದಿಗಳಿಗೆ ಸೇರಿದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ನಾನು ಮೂಲತಃ ಮಾಲೂರು ತಾಲೂಕಿನ ನಿದರ ಮಂಗಳ ಊರಿಗೆ ಸೇರಿದವರು ಎಂದರೆ ಸರಿ . ದಾವಾಸ್ತಿಗಳು ವಾದಿಗಳಿಗೆ ಸೇರಿದ್ದರೂ ಸಹ ನಾನು ಸುಳ್ಳು ಅಂಶಗಳನ್ನು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿ ಅದಕ್ಕೆ ಪೂರಕವಾಗಿ ಸುಳ್ಸು ಸಾಕ್ಷಿ ಹೇಳುತ್ತೀದ್ದೇನೆಂದರೆ ಸರಿಯಲ್ಲ.

ನಾನು ಸದರಿ ನಿದರ್ ಮಂಗಳ ಊರಿನ ಚಿನ್ನಪ್ಪರವರ ಮಗ ಎಂದರೆ ಸರಿ ಸದರಿ ನನ್ನ ತಾಯಿಯ ಹೆಸರು ಮುನಿ ವೆಂಕಟಮ್ಮ ಎಂದಾಗಿರುತ್ತದೆ . ನಾನು ದಾಖಲಿಸಿದ ಮೇಲ್ಮನವಿಗಳಲ್ಲಿ ನನ್ನ ತಂದೆಯವರ ಹೆಸರನ್ನು ವೆಂಕಟ ಮುನಿಯೆಂದು ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**

-